MYSORE LEGISLATIVE ASSEMBLY.

TWENTY-SIXTH DAY.

Wednesday, 23rd March 1955.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

MR. SPEAKER.—Questions Nos. 110 and 217 will be taken up together.

Adult Literacy Council.

Q.—110. SRIMATHI B. L. SUBBAMMA (Chikmagalur-Mudigere).—

Will the Government be pleased to state :—

(*a*) the number of divisions formed by the Adult Literacy Council in the State for administrative purposes ;

(*b*) the names of districts included in each division ;

(*c*) whether they would club together the Adult Literacy Campaign and the Cultural Department activities to carry on the propaganda work ?

A.—SRI A. G. RAMACHANDRA RAO (Minister for Law and Education).—

(*a*) Three.

(*b*) (i) *Bangalore Division*—

Bangalore Urban District.
Bangalore Rural District.
Tumkur District.
Kolar District.

(ii) *Mysore Division*—

Mysore City.
Mysore District.
Mandya District.
Hassan District.
Chickmagalur District.

(iii) *Chitaldrug Division*—

Chitaldrug District.
Shimoga District.
Bellary District.

(*c*) It is a matter of opinion.

Q.—217. SRI T. G. THIMMEGOWDA (Tiptur).—

Will the Government be pleased to state :—

(*a*) the expenses incurred by Government for Adult Education from the inception of the scheme till the end of 1954 yearwise and under various heads;

(*b*) the number of persons reported as made literate also yearwise and districtwise;

(*c*) whether they consider the advisability of abolishing the scheme and the expenditure ?

A.—SRI A. G. RAMACHANDRA RAO (Minister for Law and Education).—

(*a*) Please see Statement I below.
(*b*) Please see Statement II below.
(*c*) No.

(SRI A. G. RAMACHANDRA RAO.)

STATEMENT I.

Statement of expendi ure incurred by the Mysore State Adult Education Council from its inception till the end of 1953-54 yearwise—and under various heads and the lumpsum grant paid by Government during those years.

Headsof Account	1941—42	1942—43	1943—44	1944—45	1945—46	1946—47	1947—48	1948—49	1949—50	1950—51	1951—52	1952—53	1953—54
1	2	3	4	5	6	7	8	9	10	11	12	13	14
	Rs.	Rs.	Rs.	Rs	Rs	Rs.	Rs.	Rs.	Rs.	Rs.	Rs.	Rs.	Rs.
1 Literacy ...		15,025	42,006	51,261	2,03,948	1,78,384	1,68,269	1,87,339	1,60,188	1,49,854	1,21,442	1,15,042	1,12,366
2 Follow-up Book Clubs...		1,815	...	5,085	6,040	823	6,669	10,213	8,774	381	10,000	5,000	9,485
3 Rural Libraries ...		...	9,930	21,611	42,953	35,606	35,726	39,084	38,765	39,049	32,190	51,283	46,429
4 Supervision ...		...	(in item 13)	10,134	39,963	49,061	60,308	69,631	57, 97	75,570	76,944	81,588	85 443
5 Spl. A.E. Centres:													
Ramanagaram ...		...	...	...	...	...	7,591	20,863	18 2	10,781	7,840	9,617	...
Bhadravathi ...		...	...	...	...	...	...	...	...	4 194	5,011	5,826	5,657
6 Training of teachers/ librarians/workers.	Details not available	...	2,276	3,955	5,280	3,401	5,706	3,753	2,535	4,536	7,100	5,255	4,285
7 Vidyapeethas ...		...	..	...	6,338	11,189	15,721	28,776	19,4°7	30,507	41,025	53,912	61,446
8 General Education ...		...	578	1,507	4,250	3,975	17,264	35,083	22,323	29,176	31,757	37,517	39,079
9 Publicity ..		113	770	942	1,752	4,800	5,727	5,356	7 281	7,601	5,425	5,573	7,739
10 General and Circle Libraries.		...	...	779	5,944	9,673	8,259	8,095	3,806	5,516	6,694	11,500	11,164
11 Deputation ...		...	...	...	...	...	...	760	..	294	500	317	400
12 Research ...		...	...	...	...	...	...	...	...		...	225	1,375
13 Organisation ...		...	12,612	14,716	30, 66	49,764	58,967	74,182	52,182	72,923	65,310	76,454	80,031
14 Administration ...		...	...	...	...	...	...		10,878	14,678	13,505	14,997	13,924
15 Direction ...		5,581	6 562	7,760	15,104	15,119	23,723	32,111	27,115	35,186	38,893	41,019	43,799
16 Miscellaneous ...		...	...	...	...	...	...	...	...		1,000	5,500	822
17 Social Service Camps ...		...	...	...	...	...	...	3,232	6,285	10,062	9,295	9,543	11,189
Total ...	3,669	22,534	74,734	1,17,780	3,66,738	3,61,795	4,13,930	5,18,483	4,35.428	4,91,308	4,74,961	5,30,167	5,31,633
Government Grant ...	5,500	17,733	82,500	1,52,500	3,00,500	4,71,000	3,60,000	4,40,000	3,80,000	3,99,799	4,35,141	4,95 404	4,95,630

STATEMENT II.

Statement showing the number of persons made literate—districtwise and yearwise from the inception of the Mysore State Adult Education Council.

Heads of Account	1941-42	1942-43	1943-44	1944-45	1945-46	1946-47	1947-48	1948-49	1949-50	1950-51	1951-52	1952-53	1953-54
1	2	3	4	5	6	7	8	9	10	11	12	13	14
1 Mysore City ...	Districtwise details are not available for this period.						604	172	335	1,673	1,764	972	910
2 Mysore District ...							4,607	2,192	6,763	4,372	3,414	3,640	2,723
3 Mandya ...							1,029	3,204	1,327	3,286	2,478	2,749	2,921
4 Hassan ...							2,505	1,480	1,477	2,826	3,573	3,736	2,952
5 Chikmagalur ...							1,814	1,261	444	931	1,095	1,245	1,360
6 Bangalore City ...							175	1,711	1,327	1,525	1,6 9	2,402	1,262
7 Bangalore District.							4,416	2,245	4,998	4,993	4,419	4,498	2,707
8 Tumkur ...							5,149	4,189	1,215	4,594	1,686	4,526	2,365
9 Kolar ...							6,164	5,807	6,015	5,245	3,300	3,620	3,813
10 Chitaldrug ...							4 761	5,717	5,978	3,205	2,583	2,773	2,467
11 Shimoga ...							2,009	1,4 3	2,075	1,425	3,322	1,858	2,742
12 Bhadravathi ...							...	...	...		469	522	695
13 Ramanagaram ...							1,094	3,984	1,890	1,494	738	...	...
14 Vidyapeetha ...							...	577	331	362	...	...	...
Total ...	2,265	6,201	7,076	13,638	50,817	44,265	34,327	34,022	34,175	35,931	30,450	32,541	26,917

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಸಂಸ್ಥೆ ನಡೆಸಿರುವ ಕಾರ್ಯಕ್ರಮಗಳೇನು ?

*ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಭಾಗವಾಗಿ ವಿಂಗಡಿಸಬಹುದು. ಒಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡಿ ಕೆಲಸ ಮಾಡುವುದು, ಇನ್ನೊಂದು ಅಕ್ಷರ ಪ್ರಚಾರ ಮಾಡುವುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅಕ್ಷರ ಪ್ರಚಾರ ಕಾರ್ಯವನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಚೆಗೆ ಶಿವಮೊಗ್ಗ ಡಿವಿಜನ್ನನ್ನು ಮೈಸೂರು ಡಿವಿಜನ್ನಿಗೆ ವರ್ಗ ಮಾಡಿರುವುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೈಸೂರು ಡಿವಿಜನ್ನಿನಿಂದ ಶೃಂಗೇರಿಯಲ್ಲಿ ಪ್ರಚಾರ ಮಾಡುವುದು ಸಾಧ್ಯವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೈಸೂರು ಡಿವಿಜನ್ನಿನಿಂದ ಚಿಕ್ಕಮಗಳೂರು ಡಿವಿಜನ್ನಿಗೆ ಎಷ್ಟು ದೂರ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೈಸೂರಿನಿಂದ ಅವರು ಬರಬೇಕಾಗಿಲ್ಲ, ಅಲ್ಲೇ ಕೆಲಸಮಾಡುತ್ತಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕೇಂದ್ರವನ್ನು ಮೈಸೂರಿನಲ್ಲಿಟ್ಟುಕೊಂಡಿರುವಾಗ, ಹೇಗೆ ಒಬ್ಬರು ಅಷ್ಟುದೂರ ಪ್ರದೇಶದಲ್ಲಿ ಪ್ರಚಾರ ಮಾಡುವುದಕ್ಕಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೊಂದು ಜಿಲ್ಲೆಗೂ ಕೊಡುವುದಕ್ಕೆ ಸಾಧ್ಯವಿಲ್ಲ. ಮೊದಲು ಹೀಗೆ ಮೂರು ಡಿವಿಜ್ ಮಾಡಿಕೊಂಡು ಆ ಮೇಲೆ ನೋಡೋಣ ಎಂದು ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳನ್ನು ಒಟ್ಟುಸೇರಿಸಿ ಒಂದು ಡಿವಿಜ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎ ಜಿ. ರಾಮಚಂದ್ರರಾವ್.—ಅದು ಮುಂದೆ ಅವಶ್ಯಕತೆ ಬಿದ್ದರೆ ಯೋಚನೆ ಮಾಡಿ ನೋಡಬೇಕಾದ ವಿಷಯ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಗ್ರಾಮಗಳಲ್ಲಿ ಏನಾದರೂ ವಿಶೇಷ ಕಾರ್ಯಕ್ರಮ ನಡೆಸಬೇಕಾದರೆ ಅದಕ್ಕೆ ಬೇಕಾಗುವ ಹಣಕ್ಕೆ ಮಂಜೂರಾತಿ ಪಡೆಯಬೇಕಾದರೆ ಇದು ಕೇಂದ್ರ ಸಂಸ್ಥೆಯಿಂದ ಬರಬೇಕೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅಲ್ಲಿಂದ ಹಣ ಮಂಜೂರು ಮಾಡುವುದು ಕಷ್ಟವಾದುದರಿಂದ ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನರೇ ಮಂಜೂರು ಮಾಡುವಂತೆ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು organisational matter ; ನೋಡಬೇಕು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ವಯಸ್ಕರ ಶಿಕ್ಷಣ ಸಮಿತಿ, ಭಾರತ ಸೇವಾದಳ, ಸ್ಕೌಟ್ ಇವು ಮೂರನ್ನೂ ಒಟ್ಟಿಗೆ ಸೇರಿಸುವುದು ಸಾಧ್ಯವಿಲ್ಲವೆ ?

ಶ್ರೀ ಎ. ಜಿ ರಾಮಚಂದ್ರರಾವ್.—ಈಗ ಸದ್ಯಕ್ಕೆ ಅದು ಸಾಧ್ಯವಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಕೇಂದ್ರ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಎಷ್ಟುಮಂದಿ ಸದಸ್ಯರಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸುಮಾರು ಹತ್ತೊಂಭತ್ತು ಜನರೆಂದು ಜ್ಞಾಪಕ.

ಶ್ರೀ ಟಿ. ಜಿ. ತಿಮ್ಮಪ್ಪಗೌಡ.—ಅಧ್ಯಕ್ಷರ ಮತ್ತು ಸದಸ್ಯರ ಭತ್ಯೆಪಟ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಜಿ. ತಿಮ್ಮೇಗೌಡ.—ಇದರಿಂದ ಸಂಸ್ಥಾನದಲ್ಲಿ ಎಷ್ಟು ಜನರು ವಿದ್ಯಾವಂತರಾಗಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಉತ್ತರ ಕೊಟ್ಟಿದೆ.

Sri B. Y. NEELE GOWDA.—May I know whether the Government have got a Governmental agency to check the reports given by this organisation ?

Sri A. G. RAMACHANDRA RAO.—Yes.

Sri B. Y. NEELE GOWDA.—Has it come to the notice of the Government that these people are in the habit of making false reports ?

Sri A. G. RAMACHANDRA RAO.—No.

Sri B. Y. NEELE GOWDA.—Is it possible to appoint some Governmental authority to check and verify these reports ?

Sri A. G. RAMACHANDRA RAO.—We are getting the annual reports. If any irregularity is brought to our notice, we will look into them.

Sri B. Y. NEELE GOWDA.—Will the Government consider the desirability of verifying the report regarding the number of persons made literate by this organisation ?

Sri A. G. RAMACHANDRA RAO.—We will consider.

ಶ್ರೀ ಟಿ. ಸಿ. ಬಸಪ್ಪ.—ಪರಿಶಿಷ್ಟದಲ್ಲಿ ಕೊಟ್ಟಿರುವ ಅಂಕಿಗಳ ಪ್ರಕಾರ ವರ್ಷವರ್ಷವೂ ಖರ್ಚು ಜಾಸ್ತಿಯಾಗಿ ಅಕ್ಷರಸ್ಥರ ಸಂಖ್ಯೆ ಕಡಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಟಿ. ಸಿ. ಬಸಪ್ಪ.—ಅಂದಮೇಲೆ ಹೆಚ್ಚು ಖರ್ಚಾಗುತ್ತಿರುವುದರಿಂದ ಬಹಳ ನಷ್ಟವಾಗುತ್ತದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸಮಿತಿಯ ಅಧ್ಯಕ್ಷರೂ, ಕಾರ್ಯದರ್ಶಿಯವರೂ ಬಂದಿದ್ದಾಗ ಇದನ್ನು ವಿಚಾರ ಮಾಡಿದೆ. ಈಚೆಗೆ ವಿದ್ಯಾ ಪೀಠಗಳನ್ನು ಸ್ಥಾಪನೆ ಮಾಡಿದ್ದರಿಂದ ಅಕ್ಷರಸ್ಥರ ಸಂಖ್ಯೆ ಕಡಮೆಯಾಗಿದೆ ಎಂದು ಒಪ್ಪಿಕೊಂಡರು.

ಶ್ರೀ ಟಿ. ಸಿ. ಬಸಪ್ಪ.—Supervision, organisation, administration and direction ಎಲ್ಲವನ್ನೂ ಸೇರಿಸಿದರೆ ಬರಿಯ ಸಿಬ್ಬಂದಿಗೇ ಅರ್ಧಕ್ಕಿಂತ ಜಾಸ್ತಿ ಮೊಬಲಗು ಖರ್ಚಾಗುತ್ತಿರುವುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿಯೂ ವಿದ್ಯಾ ಇಲಾಖೆಯಲ್ಲಿ, it is the human element that costs more than brick and mortar.

* Asterisk indicates that the remarks or speeches have not been revised the Member concerned.

ಶ್ರೀ ಟಿ. ಸಿ. ಬನಪ್ಪ.—ನನ್ನ ಪ್ರಶ್ನೆ supervision, organisation, administration and direction ಇವಕ್ಕೆ ಇಷ್ಟು ಹೆಚ್ಚು ಖರ್ಚಾಗುತ್ತದೆ, ಇದೇ ರೀತಿ ಬಾಕಿ ಇಲಾಖೆಗಳಲ್ಲಿಯೂ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಇಲಾಖೆ ಇಲಾಖೆಗೂ ವ್ಯತ್ಯಾಸವಾಗುತ್ತದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಇಲಾಖೆಯಲ್ಲೇ ಹೀಗೆ.

ಶ್ರೀ ಟಿ. ಸಿ. ಬನಪ್ಪ.—ವಯಸ್ಕರ ಶಿಕ್ಷಣ ಸಮಿತಿಯನ್ನು ರದ್ದು ಮಾಡಬೇಕೆಂದು ಬಹಳ ದಿವಸಗಳಿಂದ ಸದಸ್ಯರಿಂದ ಒತ್ತಾಯ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರು ಆ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಟಿ. ಸಿ. ಬನಪ್ಪ.—ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾ ನುಧಾರಣಾ ಸಮಿತಿಯವರು ಅಕ್ಷರ ಪ್ರಚಾರ ಕಾರ್ಯವನ್ನು ವಿದ್ಯಾ ಇಲಾಖೆಗೆ ಸೇರಿಸಿ, ವಿದ್ಯಾ ಪೀಠಗಳನ್ನು ಮಾತ್ರ ಇವರಿಗೆ ವಹಿಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಸಿ. ಬನಪ್ಪ.—ವಿದ್ಯಾಭ್ಯಾಸದ ಇಲಾಖೆಗೆ ವಹಿಸುವುದರಿಂದ ಕೆಲಸ ಸರಿಯಾಗಿ ನಡೆಯುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರಿಶೀಲಿಸಿ ನೋಡಬೇಕಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಕ್ಷರಾಭ್ಯಾಸದ ಕಡೆಗೆ ಗಮನಕೊಡುವುದನ್ನು ಕಡಮೆಮಾಡಿ ಹಳ್ಳಿಗಳಲ್ಲಿ ಹೊಸದಾಗಿ ಪುಸ್ತಕ ಭಂಡಾರ ಮುಂತಾದುವನ್ನು ತೆರೆಯಲು ಹೆಚ್ಚು ಗಮನ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕೆಲಸವನ್ನು ಇನ್ನೂ ಹೆಚ್ಚು ಯಶಸ್ವಿಯಾಗಿ ಮಾಡಬೇಕಾದರೆ ಹೆಚ್ಚು ಸಿಬ್ಬಂದಿ ಕೊಡುವುದು ಅಗತ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೆಚ್ಚು ಬೇಕಾದರೆ, ಮಾಡಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಿರಾ ತಾಲ್ಲೂಕಿನಲ್ಲಿ ವಿದ್ಯಾಪೀಠವನ್ನು ಪ್ರಾರಂಭ ಮಾಡುವುದಕ್ಕೆ ಏನು ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ವಯಸ್ಕರ ಶಿಕ್ಷಣ ಸಮಿತಿಗೆ ಸಂಬಂಧಪಟ್ಟದ್ದಾದರೂ, ಅದನ್ನು ಸ್ಥಾಪಿಸಬೇಕೆಂದು ಯೋಚನೆಮಾಡಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈ ವಯಸ್ಕರ ಶಿಕ್ಷಣ ಸಮಿತಿಗೆ ಇಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಬದಲು ಒಂದೊಂದು ಸ್ಕೂಲಿಗೆ 500 ರೂಪಾಯಿಗಳಂತೆ ಕೊಟ್ಟರೆ ಸುಮಾರು ಸಾವಿರ ಸ್ಕೂಲುಗಳನ್ನು ಸ್ಥಾಪನೆ ಮಾಡಬಹುದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೂ ಒಂದು ಅಭಿಪ್ರಾಯ.

ಶ್ರೀ ಡಿ. ಆರ್. ಕರಿಗೌಡ.—ಆ ರೀತಿ ಮಾಡಿದರೆ ಒಳ್ಳೆಯದಲ್ಲವ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೊಂದು ರೀತಿ, ಇದೊಂದು ರೀತಿ.

ಶ್ರೀ ಡಿ. ಆರ್. ಕರಿಗೌಡ.—ಈಗ ಯಾವ ಊರಿನಲ್ಲಿ ಸ್ಕೂಲಿದೆಯೋ ಅಲ್ಲತಾನೆ ಈ ಸಮಿತಿಯವರು ಕೆಲಸಮಾಡುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೂ ಇದೆ, ಹೀಗೂ ಇದೆ.

ಶ್ರೀ ಡಿ. ಆರ್. ಕರಿಗೌಡ.—ಈ ಕೆಲಸ ಸರಿಯಾಗಿ ನಡೆಯಬೇಕಾದರೆ ಸರ್ಕಾರ ಹೆಚ್ಚಿನ ಹತೋಟಿಯನ್ನಿಟ್ಟುಕೊಂಡು ಸಮಿತಿಯನ್ನೇರ್ಪಾಡು ಮಾಡುವು ದೊಳ್ಳೆಯದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಸಂಸ್ಥಾನದಲ್ಲಿ ಶೇಕಡ 20ರಷ್ಟು ಮಂದಿ ಅಕ್ಷರಸ್ಥರಾಗಿರುವುದಕ್ಕೆ ವಯಸ್ಕರ ಶಿಕ್ಷಣ ಸಮಿತಿ ಕಾರಣವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೂ ಒಂದು ಕಾರಣ.

Cultural Development (Amount spent for 1954-55.)

Q.—389. Sri Mali MARIYAPPA (Pavagada).—

Will tne Government be pleased to state :—

The amount spent on Cultural Development for 1954-55 ?

A.—Sri A. G. RAMACHANDRA RAO (Minister for Law and Education).—

Rs. 66,500 up to 31-1-1955.

ಶ್ರೀ ಮಾಲಿ ಮರಿಯಪ್ಪ.—ಮಾರ್ಚಿ ಆಖೈರುವರೆಗೆ ಇನ್ನೂ ಎಷ್ಟು ಹಣ ಖರ್ಚುಮಾಡಬೇಕೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ ?

* ಶ್ರೀ ಎ. ಜಿ. ರಾಮಚಂದ್ರರಾವ್.—ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಗೊತ್ತಿದೆ. ಇಷ್ಟೇ ಖರ್ಚಾಗುತ್ತದೆ ಅಥವಾ ಇಷ್ಟೇ ಖರ್ಚಾಗಬೇಕೆಂದು ನಿಗದಿಮಾಡಿಲ್ಲ.

ಶ್ರೀ ಮಾಲಿ ಮರಿಯಪ್ಪ.—ಈ ವರ್ಷದ ಆಖೈರಿನೊಳಗೆ ಹೆಚ್ಚು ಮಿಟಿಂಗ್‌ಗಳನ್ನು ಮಾಡಿ ಹಣವನ್ನು ಖರ್ಚುಮಾಡಬೇಕೆಂದು ಸರ್ಕಾರದವರು ಸರ್ಕ್ಯುಲರ್ ಕಳುಹಿಸಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರೀತಿಯಾವ ಸರ್ಕ್ಯುಲರ್ ಕಳುಹಿಸಿದ್ದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಮಾಲಿ ಮರಿಯಪ್ಪ.—ಸಂಸ್ಕೃತಿ ಪ್ರಸಾರ ಸಭೆಗಳು ನಡೆದ ಸಂದರ್ಭದಲ್ಲಿ ವರದಿಯನ್ನು ಸರ್ಕಾರದವರು ತರಿಸಿಕೊಳ್ಳುತ್ತಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡೈರೆಕ್ಟರಿಗೆ ಹೋಗಿ, ಅವರಿಂದ ನಮಗೆ ಬರುತ್ತದೆ.

ಶ್ರೀ ಮಾಲಿ ಮರಿಯಪ್ಪ.—ಡೈರೆಕ್ಟರಿಗೆ ಬಂದದ್ದು ತಮ್ಮಲ್ಲಿಗೆ ಬರುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂಸ್ಕೃತಿ ಪ್ರಸಾರ ಡೈರೆಕ್ಟರವರ ಒಂದು ಸಮಿತಿಗೆ ಬರುತ್ತಿದೆ, ಅಲ್ಲಿಂದ ನಮಗೆ ಬರುತ್ತದೆ.

ಶ್ರೀ ಮಾಲಿ ಮರಿಯಪ್ಪ.—ವರದಿಗಳಲ್ಲಿ ಜನರು ಸಭೆಗೆ ಹಾಜರಾಗಿರತಕ್ಕಂಥ ಸಂಖ್ಯೆ ಏನಾದರೂ ತಿಳಿಸುತ್ತಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸುತ್ತಿದ್ದಾರೆ.

ಶ್ರೀ ಮಾಲಿ ಮರಿಯಪ್ಪ.—ಅದು ಹೇಗಿದೆ ಎಂದು ಸರ್ಕಾರದ ಅಭಿಪ್ರಾಯ ?